**ವ್ಯಾಖ್ಯಾನ**

# ಮಧ್ವಮತದ ಸಿದ್ಧಾಂತದ ಪದ್ಧತಿ

**Ref.**: Purandara Chintanaa Lahari by Dr.A.B. Shyamachar, published by Sri Srinivasa Utsava Balaga ®, Bengaluru – 560019, page No. 19.

**ಕೀರ್ತನೆಯ ಚಿಂತನೆ:**

ಹರಿದಾಸ ಸಾಹಿತ್ಯದ ಹುಟ್ಟಿಗೆ, ಬೆಳವಣಿಗೆಗೆ ಹಿನ್ನೆಲೆ ಹಾಗೂ ಸ್ಫೂರ್ತಿ ಮಧ್ವಸಿದ್ಧಾಂತ. ಈ ಸಿದ್ಧಾಂತದ ಅನುಯಾಯಿಗಳೇ ಹರಿದಾಸರು. ಈ ಪರಂಪರೆಯಲ್ಲಿ ಗುರು ಹಾಗೂ ದೈವಗಳಿಗೆ ವಿಶೇಷವಾಗಿ ಪ್ರಾಶಸ್ತ್ಯ ಕೊಡಲಾಗಿದೆ. ಅದಕ್ಕೆ **'ಮುಕುಂದಭಕ್ತೌ ಗುರುಭಕ್ತಿಜಾಯ್ಯೆ'** ಎಂದು ಹೇಳಲಾಗಿದೆ. ಭಗವಂತನ ದಿವ್ಯ ದರುಶನವನ್ನು ಮಾಡಿಸುವವರೇ ಗುರುಗಳು. ಹೀಗಾಗಿ ಶ್ರೀ ಪುರಂದರರಾಡಿದ ಮಾತು **'ಗುರುವಿನ ಗುಲಾಮನಾಗುವ ತನಕ ದೊರೆಯಿದಣ್ಣ ಮುಕುತಿ'** ಎಂದು. ಈ ಮುಕುತಿಗೆ ಹೇತುವಾದ ಬ್ರಹ್ಮವಿದ್ಯೆಯನ್ನು ಬೋಧಿಸುವವರು ಗುರುಗಳು ಅದೇ ಗುರುಪರಂಪರೆ. ಈ ಗುರುಪರಂಪರೆಗೆ ಮೂಲಭೂತರಾದವರು ವಾಯುದೇವರ ಅವತಾರಿಗಳಾದ ಶ್ರೀಮದಾನಂದತೀರ್ಥರು. ಈ ತತ್ತ್ವವನ್ನಾಧರಿಸಿ ಶ್ರೀ ಪುರಂದರದಾಸರು ರಚಿಸಿದ ಅನೇಕ ಕೃತಿಗಳಲ್ಲಿ ಇಲ್ಲಿ ಒಂದನ್ನು ಪ್ರಸ್ತಾಪಿಸಲಾಗಿದೆ. ಅವರೆ ಹೇಳಿದಂತೆ 'ಮತದೊಳು ಒಳ್ಳೆ ಮತವು ಮಧ್ವಮತವು' ಎಂದು. ಅದರ ಕೆಲ ಪ್ರಮೇಯಗಳನ್ನು ಸಂಗ್ರಹಿಸಲಾಗಿದೆ.

**ಮಧ್ವಮತದ ಸಿದ್ಧಾಂತದ ಪದ್ಧತಿ**
**ಬಿಡಬ್ಯಾಡಿ ಬಿಟ್ಟುಕೆಡಬೇಡಿ** ॥ ಪ ॥

ಶ್ರೀ ಪುರಂದರದಾಸರ ಈ ಕೃತಿಯು ಆಚಾರ್ಯ ಮಧ್ವರಿಂದ ಪ್ರಚಲಿತವಾದ ವೇದವ್ಯಾಸರಿಗೆ ಸಮ್ಮತವಾದ ಸಿದ್ಧಾಂತದ ಪರಿಚಯಾತ್ಮಕವಾದದ್ದು. ಮೇಲ್ನೋಟಕ್ಕೆ ಸುಲಭ ಶೈಲಿಯಾದರೂ ಅರ್ಥಗರ್ಭಿತವಾಗಿದೆ. ಶ್ರೀಮದಾಚಾರ್ಯರು ಅವತರಿಸಿ ಬಂದದ್ದೇ ಶುದ್ಧ-ಸತ್ವ-ತತ್ತ್ವ ಸಿದ್ಧಾಂತವನ್ನು ಕಲಿಯುಗದ ಸಜ್ಜನರಿಗೆ ಬೋಧಿಸಲೆಂದು. ಇವರ ಅನುಯಾಯಿಗಳನ್ನೇ ಮಧ್ವಮತದವರು ಮಾಧ್ವರು ಎಂದು ಸಂಬೋಧಿಸಲಾಗಿದೆ. ಈ ಮತದ ಸಿದ್ಧಾಂತವೇ ತತ್ತ್ವವಾದ ವಿಷ್ಣುತತ್ತ್ವನಿರ್ಣಯ. ಸಕಲ

ಸದಾಗಮಗಳಿಂದ ನಿರ್ಣೀತವಾದ ಸಿದ್ಧಾಂತ. ಈ ತತ್ತ್ವಗಳನ್ನು ಆಡುಭಾಷೆಯಲ್ಲಿ ಬಿಚ್ಚಿಟ್ಟವರು ಹರಿದಾಸರು. ಈಶ–ದಾಸಭಾವವೆ ಈ ಹರಿದಾಸರ ಹೃದಯ. ಇವರಿಂದ ಹೊರಬಂದದ್ದು ಹರಿದಾಸ ಸಾಹಿತ್ಯ. ಇಂತಹ ಸಿದ್ಧಾಂತದ ಪದ್ಧತಿ – ಮಾರ್ಗವನ್ನು ಅನುಸರಿಸಿ, ಎಂದಿಗೂ ಬಿಡದಿರಿ ಎಂಬುದು ಸಂದೇಶವಾಗಿದೆ. ಜಗತ್ತಿನ ಸಕಲ ಜೀವಿಗಳಲ್ಲೂ ಅಂತರ್ಗತವಾದ ತತ್ತ್ವ ದ್ವೈತತತ್ತ್ವ. ಒಪ್ಪಲಿ ಬಿಡಲಿ ಇದು ಸತ್ಯ ಹಾಗೂ ನಿತ್ಯ. ಆದ್ದರಿಂದ ದಾಸರು ಭಗವಂತನೊಬ್ಬನಿರುವ ಮಿಕ್ಕೆಲ್ಲರೂ ಅವನ ದಾಸರು – ಅನುಚರರು ಎಂದು ತಿಳಿಸುವ ಮಾರ್ಗವನ್ನೆ ಅವಲಂಬಿಸಿರೆಂದರು. ಈ ಸತ್ಪಥವೇ ದಾಸರು ಹೇಳಿದ ಮಾರ್ಗ. ದುರ್ಲಭವಾದ ಈ ದೇಹ ಸಿಕ್ಕಾಗ ವ್ಯರ್ಥವಾಗಿಸದೆ ಸದುಪಯೋಗ ಮಾಡಿಕೊಂಡು ಉದ್ಧಾರರಾಗಲು ಈ ಮಾರ್ಗಾವಲಂಬಿಗಳಾಗಲು ಆದೇಶಿಸಿದರು. ಅದಕ್ಕೆಂದೆ ಬಿಡಬೇಡಿ ಬಿಟ್ಟು ಕೆಡಬೇಡಿ ಎಂದದ್ದು.

**ಹರಿಸರ್ವೋತ್ತಮನಹುದೆಂಬೊ ಜ್ಞಾನವ**
**ತಾರತಮ್ಯವನೆ ತಿಳಿವ ಮಾರ್ಗವಿದು** ॥ **1** ॥

ಪ್ರತಿಯೊಂದು ಸಿದ್ಧಾಂತಕ್ಕೂ ತನ್ನದೇ ಆದ ವಿಷಯಗಳಿರುತ್ತವೆ. ಆದರೆ ಅವು ಸದಾಗಮಗಳಿಗೆ ಅನುಸಾರಿಯಾಗಿದ್ದು, ಅನುಭವಕ್ಕೆ ವಿರುದ್ಧವಾಗದಿರುವುದು ಮುಖ್ಯವಾಗಿದೆ. ಹೀಗೆ ಪ್ರಮಾಣತ್ರಯಗಳಿಂದ ಸಮ್ಮತವಾದ ಸಿದ್ಧಾಂತವು ಮಧ್ವಸಿದ್ಧಾಂತವಾಗಿದೆ. ಅದಕ್ಕೆ ಇಂತಹ ಸಿದ್ಧಾಂತಹ ಪದ್ಧತಿಯನ್ನು ಬಿಡದಿರಿ ಎಂದದ್ದು. ಇನ್ನು ಸಿದ್ಧಾಂತದಲ್ಲಿ ಪ್ರತಿಪಾದಿತವಾದ ತತ್ತ್ವಗಳನ್ನು ಶ್ರೀವ್ಯಾಸರಾಜರು ಸಂಗ್ರಹಿಸಿ ತಿಳಿಸಿದ್ದು ಹೀಗಿದೆ –

**ಶ್ರೀಮನ್ಮಧ್ವಮತೇ ಹರಿಃ ಪರತರಃ ಸತ್ಯಂ ಜಗತ್ ತತ್ತ್ವತೋ**
**ಭೇದೋ ಜೀವಗಣಾ ಹರೇರನುಚರಾಃ ನೀಚೋಚ್ಚಭಾವಂ ಗತಾಃ ।**

**ಮುಕ್ತಿರ್ನೈಜಸುಖಾನುಭೂತಿ ರಮಲಾ ಭಕ್ತಿಶ್ಚ ತತ್ಸಾಧನಂ**
**ಹೃಕ್ಷಾದಿತ್ರಿತಯಂ ಪ್ರಮಾಣಮಖಿಲಾಮ್ನಾಯೈಕ ವೇದ್ಯೋ ಹರಿಃ ॥**

ಪ್ರಧಾನವಾದ ಸ್ವತಂತ್ರ ಹಾಗೂ ಅಸ್ವತಂತ್ರ ತತ್ತ್ವಗಳಲ್ಲಿ ಸ್ವತಂತ್ರತತ್ತ್ವ ಎನಿಸಿದವನೆ ಮಹಾವಿಷ್ಣುವು. ಇವನೇ ಸಮಸ್ತ ಜೀವರಲ್ಲಿ ಅಂದರೆ ರಮಾಬ್ರಹ್ಮೇಶಾದಿ ಜೀವಿಗಳಿಗೂ ಉತ್ತಮನಾಗಿ

ಸರ್ವೋತ್ತಮನೆನಿಸಿರುವ. ಆದ್ದರಿಂದ ಹರಿಸರ್ವೋತ್ತಮನೆಂದರು. ಮಿಕ್ಕೆಲ್ಲಾ ಜೀವಕೋಟಿಯು ಅವನ ಅನುಚರರು, ದಾಸರು. ಶ್ರೀಹರಿಯು ಎಲ್ಲರ ಅಂತರ್ಗತನಾಗಿ ಸರ್ವವ್ಯಾಪ್ತನು ಸರ್ವನಿಯಾಮಕನೂ ಆಗಿರುವ. ಜೀವಕೋಟಿಯಲ್ಲಿ ತರತಮ ಭಾವವಿದೆ. ಈಶ–ಜೀವರಲ್ಲಿ, ಈಶ–ಜಡ, ಜೀವ–ಜಡ, ಜೀವ–ಜೀವರಲ್ಲಿ ಹಾಗೂ ಜಡ–ಜಡಗಳಲ್ಲಿ ಭೇದವಿದೆ. ಈ ಪಂಚಭೇದ ಹಾಗೂ ತಾರತಮ್ಯವು ಇದ್ದು ಅನಾದಿಕಾಲದಿಂದ ನಿತ್ಯವಾಗಿದೆ. ಈ ತರತಮಗಳ ಜ್ಞಾನದಿಂದ ಎಲ್ಲ ಜೀವರಿಂದಲೂ ಉತ್ತಮನೆನಿಸಿದ ವಿಷ್ಣುವು ಪುರುಷೋತ್ತಮನೆಂದು ತಿಳಿಯುವುದು. ಇದು ಎಲ್ಲ ಶಾಸ್ತ್ರಗಳ ಮತಿತಾರ್ಥವೂ ಆಗಿದೆ. ಇಂತಹ ಪರಮಾತ್ಮನನ್ನು ಕಾಣಲು ಅನುಗ್ರಹ ಪಡೆಯಲು ಸನ್ಮಾರ್ಗವಾಗಿ ಮಧ್ವಸಿದ್ಧಾಂತವಿದೆ. ಈ ಸುಖ–ದುಃಖ ಮಿಶ್ರಣವಾದ ಸಂಸಾರದ ವಿಮೋಚನೆಗೆ ದಾರಿದೀಪವಾಗಿದೆ.

**ಘೋರಯಮನ ಭಯ ದೂರಕೆ ಮಾಡಿ ಮು–**
**ರಾರಿಯ ಚರಣವ ಸೇರುವ ಮಾರ್ಗವು** ॥ 2 ॥

ಎಲ್ಲ ಜೀವರ ಅಂತಿಮ ಗುರಿ ಇಹ–ಪರಗಳಲ್ಲಿ ಸುಖ ಕಾಣುವುದು. ಎಂದಿಗೂ ನರಕದ ಹಾದಿಗೆ ಹೋಗದೆ ನಿತ್ಯಸುಖದ ತಾಣವನ್ನು ಸೇರುವುದು. **'ಸುಖ ಮೇವ ಸ್ಯಾತ್ ದುಃಖಮನಾಗಪಿ ಮಾಭೂತ್'** ಎಂಬುದಾಗಿದೆ. ಹೀಗಾಗಲು ಅನುಸರಿಸಬೇಕಾದ ಪದ್ಧತಿ, ಅವಲಂಬಿಸಬೇಕಾದ ಮಾರ್ಗ ಎಂತಹದ್ದೆಂದು ಯೋಚಿಸಲೇ ಬೇಕು. ದಾಸರೆಂದರು ಇದಕ್ಕಿರುವುದು ಒಂದೇ ಮಾರ್ಗ, ಅದುವೇ ಮಧ್ವ ಮಾರ್ಗ ಮೋಕ್ಷಮಾರ್ಗವು ಅದೇಯಾಗಿದೆ. ಮುರಾರಿಯ ಚರಣ ಸೇರುವ ಮಾರ್ಗವೆಂದರೆ ಈ ಮಾರ್ಗವೆಂದು ದಾಸರು ಶಾಸ್ತ್ರೋಕ್ತ ಹಾಗೂ ಅನುಭವದ ಮಾತುಗಳಿಂದ ಸಮರ್ಥಿಸಿದರು. ಶ್ರೀಮದಾಚಾರ್ಯರ ಮಾತು 'ಸಂಕೀರ್ತ್ಯ ನಾರಾಯಣ ಶಬ್ದಮಾತ್ರಂ ವಿಮುಕ್ತದುಃಖಾಃ ಸುಖಿನೋ ಭವಂತಿ' ಸಮಸ್ತ ದುಃಖಗಳಿಂದ ದೂರಾಗಿ ಸುಖದಿಂದಿರಲು ನಾರಾಯಣನ ಕೀರ್ತನ ಸಾಕೆಂದರು. ಮತ್ತೊಂದು ಕಡೆ – 'ನ ಯಾತಿ ನರಕಂ ನರಃ' ಎಂದೂ ಹೇಳಿದರು.

ಮನುಷ್ಯ ದಿನ ನಿತ್ಯವೂ ಎಷ್ಟೊ ಜನುಮಗಳಿಗಾಗುವಷ್ಟು ಪಾಪವೆಸಗುವ. ಆದರೇ ಈ ಮಧ್ವಮಾರ್ಗ ಹಿಡಿದಲ್ಲಿ 'ಇನ್ನೇತರ ಭಯ' ಎಂದಂತೆ ಯಮನ ಬಾಧೆ ಅಂದರೆ ಶಿಕ್ಷೆಯನ್ನು ಪಡೆಯಲಾರ. ಸನ್ಮಾರ್ಗಗಾಮಿಯಾದಲ್ಲಿ ಯಮನ ಭಯ ದೂರಾಗದಿರದು. ಅದಕ್ಕೆಂದೇ ದಾಸರು ಶ್ರೀಹರಿಯ ಚರಣ ಹಿಡಿದಲ್ಲಿ ಅವನನ್ನು ಸದಾ ಆರಾಧಿಸಿ ಮನಮೆಚ್ಚಿಸಿದಲ್ಲಿ ನರಕದ ಚಿಂತಿಲ್ಲ. ಅದಕ್ಕೆ ದಾಸರು ಭಗವಂತನನ್ನು

ಒಲಿಸಿಕೊಳ್ಳುವ ಮಾರ್ಗವನ್ನು ಅವಲಂಬಿಸಿ ನಡೆಯಿರೆಂದರು. ಇದು ಸಾಧನೆಯನ್ನು ಮಾಡಿಸಿ ಅಪರೋಕ್ಷಜ್ಞಾನಕ್ಕೂ ಹೇತುವಾಗಿ ಕಡೆಗೆ ಪರಮಾತ್ಮನ ಸಾಕ್ಷಾತ್ಕಾರ ಮಾಡಿಸುವಲ್ಲಿ ಸಂಶಯವಿಲ್ಲ ಎಂದರು.

**ಭಾರತೀಶ ಮುಖ್ಯಾಪ್ರಾಣಾಂತರ್ಗತ**
**ನೀರಜಾಕ್ಷ ನಮ್ಮ ಪುರಂದರವಿಠಲನ** ॥ **3** ॥

ಭಗವಂತನ ನೇರ ಪ್ರತಿಬಿಂಬರು ಮುಖ್ಯಪ್ರಾಣರು. ಇವರು ಸಮಸ್ತ ಜಗತ್ತಿಗೆ ತ್ರಾಣರು. ಭಾರತೀಪತಿಯಾದ ವಾಯುದೇವರೆ ಕಲಿಯುಗದಲ್ಲಿ ಮಧ್ವರಾಗಿ ಬಂದು ಸಜ್ಜನರಿಗೆ ಮಧ್ವಮಾರ್ಗವೆಂಬ ಉದ್ಧಾರದ ಮಾರ್ಗವನ್ನು ತೋರಿದರು. ಯಾವುದೇ ಆಚರಿಸಲ್ಪಟ್ಟ ಸತ್ಕರ್ಮಾನುಷ್ಠಾನವು ಸಿದ್ದಿಸಲು, ಭಗವಂತನಿಗೆ ಸಮರ್ಪಿತವಾಗಲು ಅದು ಭಾರತೀರಮಣ ಮುಖ್ಯ ಪ್ರಾಣಾಂತರ್ಗತವೇ ಆಗಬೇಕೆಂಬುದು ಶಾಸ್ತ್ರಗಳ ವಿಧಿಯಾಗಿದೆ. ಇಲ್ಲದಿದ್ದಲ್ಲಿ ವ್ಯರ್ಥವೇ ಸರಿ. ಅಧಿಷ್ಟಾನ ವಾಯುದೇವರು ಭಗವಂತನ ಪ್ರತಿನಿಧಿಗಳು ಅಲ್ಲದೆ ಶ್ರೀಹರಿಗೆ ತಲುಪಿಸುವ ಮಧ್ಯವರ್ತಿಗಳು. ಈ ರಹಸ್ಯವನ್ನು ತಿಳಿಸಿಕೊಟ್ಟವರು ಶ್ರೀಮದಾನಂದತೀರ್ಥರು. ಹೀಗಾಗಿ ಯಾವ ಕಾರಣಕ್ಕೂ ಸಜ್ಜನರು ಮಧ್ವಮಾರ್ಗವನ್ನು ಬಿಡುವಂತಿಲ್ಲ. ಅದಕ್ಕೆ ದಾಸರು **'ಬಿಡಬೇಡಿ ಬಿಟ್ಟು ಕೆಡಬೇಡಿ'** ಎಂಬುವ ಸಂದೇಶ ಆದೇಶವನ್ನು ಕೊಟ್ಟು ಸಲಹಿದರು. ಕಡೆಗೆ ಮೋಕ್ಷವನ್ನು ಪಡೆಯಲೂ ವಾಯುದೇವರ ಅನುಗ್ರಹ ಅನಿವಾರ್ಯ. ಇವರು 'ಏನಂ ಉದ್ಧರ, ಏನಂ ಮೋಚಯ' ಹೀಗೆ ಉತ್ತೇಜಿಸು–ಉದ್ಧರಿಸು ಎಂದು ಶ್ರೀಹರಿಯಲ್ಲಿ ವಿನಂತಿಸಿದಲ್ಲಿ ಮಾತ್ರ ಮುಕ್ತಿ ಎಂಬುದನ್ನು ತಿಳಿದಿರಬೇಕು. ಈ ಪವಮಾನರೇ ನಮ್ಮ ಕುಲಗುರುಗಳು, ಆತ್ಮೋದ್ಧಾರಕ ಗುರುಗಳು. ಎಂದಾದ ಮೇಲೆ ಇವರ ಉಪದೇಶಿಸಿದ ಮಾರ್ಗವನ್ನಲ್ಲದೆ ಬೇರಾವ ಮಾರ್ಗವುಂಟು ಎಂದು ತಿಳಿಯುವುದೇ ಮಧ್ವಮತದ ಪದ್ಧತಿಯಾಗಿದೆ. 'ಹನುಮನ ಮತವೇ ಹರಿಯ ಮತ' ಎಂದಂತೆ ಹರಿ–ಹರಿಯರಲ್ಲಿ ಭಿನ್ನಮತವೆಂಬುದಿಲ್ಲ. ಭಾರತೀಶ ಮುಖ್ಯ ಪ್ರಾಣಾಂತರ್ಗತವಾದ ನೀರಜಾಕ್ಷನಾದ ಪುರಂದರವಿಠಲನ ಸೇರುವ ಮಾರ್ಗ ಎಂದರೆ ಮಧ್ವಮತದ ಸಿದ್ಧಾಂತದ ಪದ್ಧತಿ.

**ಶ್ರೀ ಕೃಷ್ಣಾರ್ಪಣಮಸ್ತು**